## ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ, ಮೈಸೂರು ತಾಲೂಕು ಮತ್ತು ಜಿಲ್ಲೆ

## ಸೇತುಬಂಧ ಸಾಧನಾ ಪರೀಕ್ಷೆ – 9 ನೆಯ ತರಗತಿ – ಪ್ರಥಮ ಭಾಷೆ ಕನ್ನಡ ಪ್ರಶ್ನೋತ್ತರ ಪತ್ರಿಕೆ

| ವಿದ್ಯಾರ್ಥಿಯ ಹೆಸರು: | ದಾಖಲಾತಿ ಸಂಖ್ಯೆ: |
|---|---|

**ಸಾಮರ್ಥ್ಯ –1. ಶಿಕ್ಷಕರು ಹೇಳಿದ ಪದಗಳ ಉಕ್ತಲೇಖನ ಬರೆಯುವುದು**

| | |
|---|---|
| | |
| | |
| | |
| | |
| | |

**ಸಾಮರ್ಥ್ಯ –2. ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಡಿವಿಜಿ ಅವರು ಆಧುನಿಕ ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಒಬ್ಬರು. 'ಕನ್ನಡ ಸಾರಸ್ವತ ಲೋಕದ ಭೀಷ್ಮ' ಎಂದು ಕರೆಯಿಸಿಕೊಂಡವರು. ಅವರದ್ದು ಹೋಲಿಕೆ ಇಲ್ಲದ ಅಪೂರ್ವ ವ್ಯಕ್ತಿತ್ವ. ಇತರ ಸಾಹಿತಿಗಳಂತೆ ಅವರು ಸಾಹಿತಿ ಮಾತ್ರವಾಗಿರಲಿಲ್ಲ. ಹೆಸರಾಂತ ಪತ್ರಕರ್ತರಾಗಿದ್ದರು, ಹಿರಿಯ ವೇದಾಂತಿಯಾಗಿದ್ದರು, ರಾಜ್ಯಶಾಸ್ತ್ರದಲ್ಲಿ ಆಳವಾದ ತಿಳಿವಳಿಕೆಯುಳ್ಳವರಾಗಿದ್ದರು. ಅವರನ್ನು 'ಮಹಾಧೀಮಂತ' ಎಂಬ ಮಾತಿನಿಂದ ವರ್ಣಿಸುವುದು ಸರಿಯಾದೀತೇನೋ. ಡಿವಿಜಿ ಅವರ ಹುಟ್ಟೂರು ಕೋಲಾರ ಜಿಲ್ಲೆಗೆ ಸೇರಿದ ಮುಳಬಾಗಿಲು. ಅವರದು ವೇದಶಾಸ್ತ್ರ ಸಂಪನ್ನರಾದ ಹಿರಿಯರಿದ್ದ ಕುಟುಂಬ. ಅವರ ತಂದೆ ವೆಂಕಟರಮಣಯ್ಯ, ತಾಯಿ ಅಲಮೇಲಮ್ಮ. ಡಿವಿಜಿ ಅವರ ಮನಸ್ಸಿನ ಮೇಲೆ ಬಹಳ ಪ್ರಭಾವ ಬೀರಿದ ವ್ಯಕ್ತಿಗಳು ಇಬ್ಬರು. ಒಬ್ಬರು ಅವರ ಅಜ್ಜಿ, ಎಂದರೆ ತಾಯಿಯ ತಾಯಿ ಸಾಕಮ್ಮ. ಮಹರ್ಷಿಪ್ರಾಯರಾದ ಚೇತನ ಎಂದು ಡಿವಿಜಿ ಅವರನ್ನು ವರ್ಣಿಸಿದ್ದಾರೆ. ಇನ್ನೊಬ್ಬರು ಅವರ ಸೋದರಮಾವ ತಿಮ್ಮಪ್ಪ. ಪ್ರಸಿದ್ಧ ಕೃತಿಯಾದ ಮಂಕುತಿಮ್ಮನ ಕಗ್ಗದಲ್ಲಿ ತಿಮ್ಮ ಅವರ ಹೃದಯಸ್ಪರ್ಶಿಯಾದ ಚಿತ್ರಣವಿದೆ.

**ಪ್ರಶ್ನೆಗಳು :**

(1) ಡಿವಿಜಿ ಅವರು ಏನೆಂದು ಕರೆಯಿಸಿಕೊಂಡವರು?

| |
|---|
| |
| |

(2) ಡಿವಿಜಿ ಅವರ ಹುಟ್ಟೂರು ಯಾವುದು?

| |
|---|
| |
| |

(3) ಡಿವಿಜಿ ಅವರ ತಂದೆತಾಯಿ ಹೆಸರೇನು?

| |
|---|
| |
| |

(4) ಡಿವಿಜಿ ಅವರ ಮೇಲೆ ಪ್ರಭಾವ ಬೀರಿದ ಇಬ್ಬರು ವ್ಯಕ್ತಿಗಳು ಯಾರು?

| |
|---|
| |
| |

**ಸಾಮರ್ಥ್ಯ –3. ಕೆಳಗಿನ ಪದ್ಯಭಾಗದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ವಿದ್ಯವೇ ತಾಯ್ತಂದೆ । ಬುದ್ಧಿ ಸೋದರಮಾವ ।
ಅದ್ವಾನಕಾದವನೆ ನಂಟ – ಸುಖದಿ ತಾ ।
ನಿರ್ದುದೇ ರಾಜ್ಯ ಸರ್ವಜ್ಞ

ಬಲ್ಲವರ ಒಡನಾಟ । ಬೆಲ್ಲವನು ಮೆದ್ದಂತೆ ।
ಅಲ್ಲದಹುದೆಂಬ ಅಜ್ಞಾನಿಯೊಡನಾಟ ।
ಕಲ್ಲುಹಾದಂತೆ ಸರ್ವಜ್ಞ

| |
|---|
| |
| |
| |
| |
| |
| |
| |
| |

**ಸಾಮರ್ಥ್ಯ –4.**

**ಕೊಟ್ಟಿರುವ ಪ್ರತಿ ಪ್ರಶ್ನೆಗೆ ಅಥವಾ ಅಪೂರ್ಣ ಹೇಳಿಕೆಗೂ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.**

1. 'ಕೃಷ್ಣನು ಶಕಟನ ಸೊಂಟವನ್ನು ಮುರಿದನು.' – ಈ ವಾಕ್ಯದಲ್ಲಿರುವ ಕರ್ಮಪದ ಇದು:
   (ಎ) ಕೃಷ್ಣನು (ಬಿ) ಶಕಟನ (ಸಿ) ಸೊಂಟವನ್ನು (ಡಿ) ಮುರಿದನು

| **ಉತ್ತರ** | |
|---|---|

2. ಇವುಗಳಲ್ಲಿ ಲೋಪ ಸಂಧಿಗೆ ಉದಾಹರಣೆಯಾದ ಪದ:
   (ಎ) ಹೆಸರಾಗಿದೆ (ಬಿ) ತಲೆಯೆತ್ತಿ (ಸಿ) ಕಥನವಿದೆ (ಡಿ) ಹುಲ್ಲುಗಾವಲು

| **ಉತ್ತರ** | |
|---|---|

3. 'ಎರಡು' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ:
   (ಎ) ವಸ್ತುವಾಚಕ (ಬಿ) ಗುಣವಾಚಕ (ಸಿ) ದಿಗ್ವಾಚಕ (ಡಿ) ಸಂಖ್ಯಾವಾಚಕ

| **ಉತ್ತರ** | |
|---|---|

4. 'ಹತ್ತನೆಯ ಶತಮಾನದವರೆಗೆ ಗಂಗರು ತಲೆಯೆತ್ತಿ ಬಾಳಿದರು.' – ಈ ವಾಕ್ಯವು
   (ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತವಾಕ್ಯ (ಸಿ) ಮಿಶ್ರವಾಕ್ಯ (ಡಿ) ಪ್ರಶ್ನಾರ್ಥಕವಾಕ್ಯ

| **ಉತ್ತರ** | |
|---|---|

5. 'ಹೆಮ್ಮರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ:
   (ಎ) ಕರ್ಮಧಾರಯ (ಬಿ) ತತ್ಪುರುಷ (ಸಿ) ದ್ವಂದ್ವ (ಡಿ) ಅಂಶಿ

| **ಉತ್ತರ** | |
|---|---|

6. ಷಟ್ಪದಿಯಲ್ಲಿರುವ ಪಾದಗಳ ಸಂಖ್ಯೆ;
   (ಎ) ಮೂರು (ಬಿ) ನಾಲ್ಕು (ಸಿ) ಐದು (ಡಿ) ಆರು

| **ಉತ್ತರ** | |
|---|---|

7. 'ಅಜ್ಞಾನಿಯೊಡನಾಟ ಕಲ್ಲುಹಾದಂತೆ' ಈ ವಾಕ್ಯದಲ್ಲಿರುವ ಅಲಂಕಾರ;
   (ಎ) ರೂಪಕ (ಬಿ) ಉಪಮಾ (ಸಿ) ದೃಷ್ಟಾಂತ (ಡಿ) ಉತ್ಪ್ರೇಕ್ಷೆ

| **ಉತ್ತರ** | |
|---|---|

8. 'ಅಂಬುಜ' ಪದದ ಸಮಾನಾರ್ಥಕ ಪದ ಇದು;
   (ಎ) ಮಲ್ಲಿಗೆ (ಬಿ) ದಾಸವಾಳ (ಸಿ) ಕಮಲ (ಡಿ) ಸೇವಂತಿಗೆ

| **ಉತ್ತರ** | |
|---|---|

9. ಇವುಗಳಲ್ಲಿ ತತ್ಸಮ ಪದ ಇದು;
   (ಎ) ಮಿಗ (ಬಿ) ಭಕ್ತಿ (ಸಿ) ಮುಕುತಿ (ಡಿ) ಸಿರಿ

| **ಉತ್ತರ** | |
|---|---|

10. 'ಹಸನ್ಮುಖಿ' ಪದದಲ್ಲಿರುವ ಮಹಾಪ್ರಾಣಾಕ್ಷರ ಇದು;
    (ಎ) ಹ (ಬಿ) ಸ (ಸಿ) ನ್ಮು (ಡಿ) ಖಿ

| **ಉತ್ತರ** | |
|---|---|